154 ಶ್ರೀ ನಿ-72 = 106
4RN
05-08

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಕೆ. ಹರಿಪ್ರಸಾದ್ ಇವರ ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:106ಕ್ಕೆ ಉತ್ತರ.

**ಸೂಚನೆ:**

ಕೆಐಎಡಿಬಿ ಯಿಂದ ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ ಪೋಲನಹಳ್ಳಿ ಮತ್ತು ಹರಳೂರು ಗ್ರಾಮದಲ್ಲಿ Centre for Education and Social Studies CR (ಚಾಣಕ್ಯ) ಸಂಸ್ಥೆಗೆ ಹಂಚಿಕೆ ಮಾಡಲಾದ ನಿವೇಶನ ಮತ್ತು ನಿವೇಶನ ದರ, Lease cum Sale ಆಧಾರದ ಮೇಲೆ ಹಂಚಿಕೆ ಮಾಡಲಾಗಿರುವುದೇ; ಹಂಚಿಕೆ ಮಾಡಲಾದ ಜಮೀನು ಯಾರಿಗೆ ಸೇರಿದ್ದು ಎಂಬಿತ್ಯಾದಿ ವಿವರಗಳ ಬಗ್ಗೆ ನಿಯಮ 72ರ ಅಡಿಯಲ್ಲಿ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:**

1. ದಿನಾಂಕ:26-04-2021ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಹೈಟೆಕ್, ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್, 2ನೇ ಹಂತ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಹಾಗೂ ರಾಷ್ಟ್ರೀಯ ಹೆದ್ದಾರಿ-207 ರಿಂದ ಪ್ರತ್ಯೇಕ ಸಂಪರ್ಕವಿರುವ (ಯಾವುದೇ ಮೂಲಭೂತ ಸೌಕರ್ಯವಿಲ್ಲದ) 116.16 ಎಕರೆ ಜಮೀನನ್ನು ಮೆ: ಸೆಂಟರ್ ಫಾರ್ ಎಜುಕೇಷನಲ್ ಅಂಡ್ ಸೋಷಿಯಲ್ ಸ್ಟಡೀಸ್(ರಿ) (CESS) ರವರಿಗೆ ಒಟ್ಟಾರೆ ರೂ.50 ಕೋಟಿ ಮೊತ್ತಕ್ಕೆ ಹಂಚಿಕೆ ಮಾಡಲು ನಿರ್ಣಯಿಸಿರುತ್ತದೆ.

2. ಅದರಂತೆ, ಸರ್ಕಾರಿ ಆದೇಶ ಸಂಖ್ಯೆ: ಸಿಐ 61 ಎಸ್‌ಪಿಕ್ಯೂ(ಇ) 2021, ದಿನಾಂಕ:28-04-2021ರಂದು ಹೊರಡಿಸಲಾಗಿರುತ್ತದೆ.

3. ಸದರಿ ಸರ್ಕಾರಿ ಆದೇಶದಂತೆ ಕೆಐಎಡಿಬಿ ಯು ಮೆ: ಸೆಂಟರ್ ಫಾರ್ ಎಜುಕೇಷನಲ್ ಅಂಡ್ ಸೋಷಿಯಲ್ ಸ್ಟಡೀಸ್(ರಿ) ರವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಹರಳೂರು ಮತ್ತು ಪೋಲನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್ ಗಳಲ್ಲಿ ಒಟ್ಟು116-00 ½ ಎಕರೆ ಜಮೀನನ್ನು (ಯಾವುದೇ ಮೂಲಭೂತ ಸೌಕರ್ಯವಿಲ್ಲದ) ಬಲ್ಕ್ ಲ್ಯಾಂಡ್ ಆಗಿ ಒಟ್ಟಾರೆ ರೂ.50 ಕೋಟಿ ಮೊತ್ತಕ್ಕೆ ವಿಶ್ವವಿದ್ಯಾಲಯ (ಶೈಕ್ಷಣಿಕ ಸಂಸ್ಥೆಗಾಗಿ) ಸ್ಥಾಪನೆಗಾಗಿ ದಿನಾಂಕ: 24.06.2021ರಂದು ಹಂಚಿಕೆ ಮಾಡಿರುತ್ತದೆ.

4. ದಿನಾಂಕ:24-06-2021 ರಂದು 112 ಎಕರೆ 24 ಗುಂಟೆ ಜಮೀನಿಗೆ ಸ್ವಾಧೀನ ಪತ್ರ ನೀಡಿದ್ದು, ದಿನಾಂಕ:25-06-2021 ರಂದು 99 ವರ್ಷಗಳ ಅವಧಿಗೆ ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸಲಾಗಿದೆ.

--- 2

5. ಬಾಕಿ ಉಳಿದ 3 ಎಕರೆ 16 ½ ಗುಂಟೆ ಜಮೀನಿಗೆ ದಿನಾಂಕ:19-02-2022ರಂದು ಸ್ವಾಧೀನ ಪತ್ರ ನೀಡಲಾಗಿದೆ. ಮುಂದುವರೆದು, ಮೆ:ಸೆಂಟರ್ ಫಾರ್ ಎಜುಕೇಷನಲ್ ಅಂಡ್ ಸೋಷಿಯಲ್ ಸ್ಟಡೀಸ್ (ರಿ) ರವರು ಹರಳೂರು ಗ್ರಾಮದ ಕೆಲವು ಸರ್ವೆ ನಂಬರ್ ಗಳಲ್ಲಿನ 9.52 ಎಕರೆ ಜಮೀನಿನ ವಿನಿಮಯಕ್ಕಾಗಿ(Swapping) ಕೋರಿದ್ದು, ಅದರಂತೆ ಸರ್ಕಾರದ ಪತ್ರ ಸಂ:ಸಿಐ 61 ಎಸ್ ಪಿಕ್ಯೂ (ಇ) 2021 ದಿನಾಂಕ:18-04-2022 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.

6. ತದನಂತರ, ಒಟ್ಟಾರೆ 116.16 ಎಕರೆ ಜಮೀನಿಗೆ ದಿನಾಂಕ:30-04-2022 ರಂದು ಪರಿಷ್ಕೃತ ಸ್ವಾಧೀನ ಪತ್ರ ನೀಡಿ, ದಿನಾಂಕ:20-05-2022 ರಂದು ಸದರಿ ವಿಸ್ತೀರ್ಣಕ್ಕೆ ಸಪ್ಲಿಮೆಂಟರಿ ಕರಾರು ಪತ್ರ ನೆರವೇರಿಸಲಾಗಿದೆ.

7. ಮುಂದುವರೆದು, ರಾಜ್ಯ ಸಚಿವ ಸಂಪುಟ ಸಭೆಯ ಅನುಮೋದನೆ ಪಡೆದು ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಸಿಐ 132 ಎಸ್‌ಪಿಕ್ಯೂ (ಇ) 2021, ಬೆಂಗಳೂರು, ದಿನಾಂಕ: 01.01.2022ರಲ್ಲಿ ಕೆಳಕಂಡಂತೆ ಆದೇಶಿಸಲಾಗಿದೆ.

   I. To approve the allotment of land by KIADB in their industrial areas including Single Unit Complexes etc. on 10 years lease cum sale basis and if the lessee has implemented the project and utilized more than 50% of the area allotted and has performed all the conditions of lease cum sale deed, the sale deed shall be executed after 2 years of continuous production from the date of commercial production, during the currency of the lease period.

   II. The proposed above policy will also be applicable to the existing leases of KIADB.

8. ಆದುದರಿಂದ, ಸದರಿ ಆದೇಶವು ಮಂಡಳಿಯಿಂದ 99 ವರ್ಷಗಳ ಗುತ್ತಿಗೆ ಆಧಾರದಲ್ಲಿ ಹಂಚಿಕೆಯಾಗಿರುವ ಎಲ್ಲಾ ಪ್ರಕರಣಗಳಿಗೂ 10 ವರ್ಷಗಳ ಗುತ್ತಿಗೆ ಮತ್ತು ಮಾರಾಟ ಆಧಾರದ ಕಾರ್ಯನೀತಿ ಅನ್ವಯವಾಗುತ್ತದೆ. ಮೆ: ಸೆಂಟರ್ ಫಾರ್ ಎಜುಕೇಷನಲ್ ಅಂಡ್ ಸೋಷಿಯಲ್ ಸ್ಟಡೀಸ್(ರಿ) (CESS) ಇವರಿಗೆ ಸಹ ಅನ್ವಯವಾಗುತ್ತದೆ.

**(ಕಡತ ಸಂಖ್ಯೆ:ಸಿಐ 582 ಐಎಪಿ 2024)**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು